ಒಡ್ಡಿಕೊಂಡರು. 150 ಎಸೆತಗಳನ್ನು ಎದುರಿಸಿ 96ರಲ್ಲಿದ್ದ ಅವರು ಉಸಿರು ಬಿಗಿಹಿಡಿದಂತೆ ಕಂಡರು. ಇನ್ನೊಂದು 'ಕಟ್'ಗೆ ಯತ್ನಿಸಿ ವಿಕೆಟ್ ಕೀಪರ್‌ಗೆ ಕ್ಯಾಚ್ ಕೊಟ್ಟರು. ಹೆಲ್ಮೆಟ್ ತೆಗೆದ ಮುಖ ಬೆವರಿನಿಂದ ತೊಳೆದುಹೋಗಿತ್ತು. 'ಛೆ...' ಎಂದು ಅದೇನೋ ಸ್ವಗತ ಮಾತನಾಡಿಕೊಳ್ಳುತ್ತಾ ಪೆವಿಲಿಯನ್ ಕಡೆಗೆ ಭಾರವಾದ ಹೆಜ್ಜೆ ಹಾಕಿದ್ದರು.

ಮೊನ್ನೆ ಗೌತಮ್ ಗಂಭೀರ್ ಕ್ರಿಕೆಟ್‌ಗೆ ಕೊನೆಯ ನಮಸ್ಕಾರ ಮಾಡಿದಾಗ ನೆನಪಾದದ್ದು ಅವರ ಮುಖದ ಮೇಲಿನ ಆ ಬೆವರು ಹಾಗೂ ಅಪರೂಪಕ್ಕಷ್ಟೇ ಕಾಣುತ್ತಿದ್ದ ನಗು.

ಜವಳಿ ಉದ್ಯಮಿ ದೀಪಕ್ ಹಾಗೂ ಸೀಮಾ ದಂಪತಿಯ ಮಗ ಗಂಭೀರ್. ಹುಟ್ಟಿದ 18ನೇ ದಿನಕ್ಕೆ ತಾತ–ಅಜ್ಜಿ ಮೊಮ್ಮಗನನ್ನು ದತ್ತು ಪಡೆದರು. ಮಾವ ಕೈಗೆ ಬ್ಯಾಟ್ ಕೊಟ್ಟರು. ನಾಲ್ಕೋ ಐದನೆಯದ್ದೋ ವಯಸ್ಸಿನಲ್ಲಿ ಕ್ರಿಕೆಟ್ ಆಡಲು ನಿಂತಾಗ, 'ತಾತಾ... ನಾನು ವರ್ಲ್ಡ್‌ಕಪ್‌ನಲ್ಲಿ ಆಡುವೆ' ಅಂತ ಪುಟಾಣಿ ಗೌತಮ್ ಹೇಳಿದ್ದುಂಟು.



ನವದೆಹಲಿಯ ಮಾಡರ್ನ್ ಸ್ಕೂಲ್, ಹಿಂದೂ ಕಾಲೇಜಿನ ಗಲ್ಲಿ ಗಲ್ಲಿಗಳಲ್ಲೂ ಗಂಭೀರ್ ಕ್ರಿಕೆಟ್ ಪ್ರೀತಿಯ ಕಥೆಗಳು ಹುದುಗಿರಬಹುದೇನೋ? ಲಾಲ್ ಬಹದ್ದೂರ್ ಶಾಸ್ತ್ರಿ ಕ್ರಿಕೆಟ್ ಅಕಾಡೆಮಿಯಲ್ಲಿ ಸಂಜಯ್ ಭಾರದ್ವಾಜ್ ಹೇಳಿಕೊಟ್ಟ ಕ್ರಿಕೆಟ್‌ನ ಮೂಲಪಾಠಗಳನ್ನು ಕಣ್ಣಿಗೊತ್ತಿಕೊಂಡ ಗೌತಮ್, ತನ್ನನ್ನು ತಾನು ಆಗೀಗ 'ಬುದ್ಧನಂತೆ' ಎಂದು ಕರೆದುಕೊಂಡದ್ದೂ ಇದೆ. 'ಗಂಭೀರ್' ಎನ್ನುವುದು ಅವರ ಸರ್ ನೇಮ್. ಹುಟ್ಟಿದಾರಭ್ಯ ಅವರ ಮುಖದಿಂದ ಯಾವುದೋ ಕೈ ನಗುವನ್ನು ಕಿತ್ತುಕೊಂಡುಬಿಟ್ಟಿತು. ಅದನ್ನು ಗಂಭೀರ್ ಕೂಡ ಒಪ್ಪುತ್ತಾರೆ.

ಅವರ ನಿವೃತ್ತಿಯ ಸುದ್ದಿ ಕೇಳಿದ ಮೇಲೆ ಹಿಂದಿ ಸಿನಿಮಾ ನಟ ಹಾಗೂ ಕೋಲ್ಕತ್ತ ನೈಟ್ ರೈಡರ್ಸ್ ಐಪಿಎಲ್ ಕ್ರಿಕೆಟ್ ತಂಡದ ಮಾಲೀಕ ಶಾರುಖ್ ಖಾನ್, 'ಇಷ್ಟು ದಿನ ಆಡಿದಿರಿ...ನಿಮಗೆ ಒಳ್ಳೆಯದಾಗಲಿ... ಆದರೆ ಕಷ್ಟಪಟ್ಟಾದರೂ ಸ್ವಲ್ಪ ನಗ್ರೀ...' ಎಂಬರ್ಥದಲ್ಲಿ ಪ್ರತಿಕ್ರಿಯಿಸಿದರು.

ಬುದ್ಧನ ಹೆಸರಿನ ಗಂಭೀರನ ಮುಖದಲ್ಲಿ ನಗುವೇಕೆ ಅಪರೂಪ – ಈ ಪ್ರಶ್ನೆ ಹಲವು ಸಲ ಗೌತಮ್‌ಗೆ ಎದುರಾಗಿದ್ದಿದೆ. ಅದಕ್ಕೆ ಅವರು ಕೊಟ್ಟ ಉತ್ತರ ಹೀಗಿದೆ: 'ನನಗೆ ಯಾವುದೂ ಸುಲಭವಾಗಿ ಸಿಗಲೇ ಇಲ್ಲ. 14 ವರ್ಷದೊಳಗಿನವರ ತಂಡದ ಆಯ್ಕೆಗೆಂದು ಹೋದಾಗ ನನಗೆ 12 ವರ್ಷ. ಆಗ ನಾನು ಆಯ್ಕೆಯಾಗಲಿಲ್ಲ. ದೇಶದಲ್ಲೇ ನನ್ನ ಓರಗೆಯ ಎಲ್ಲರಿಗಿಂತ ಹೆಚ್ಚು ರನ್ ಗಳಿಸಿದ್ದಾಗಲೂ 19 ವರ್ಷದೊಳಗಿನವರ ತಂಡಕ್ಕೆ ಆಯ್ಕೆ ಮಾಡಲಿಲ್ಲ. ಕರ್ನಾಟಕದ ವಿರುದ್ಧ ರಣಜಿಯ ಎರಡನೇ ಪಂದ್ಯದಲ್ಲೇ ಸೊಗಸಾಗಿ ಆಡಿದ್ದೆನಾದರೂ ಅಲ್ಲಿದ್ದವರಿಗೆ ಅದು ನೆನಪಾಗಲೇ ಇಲ್ಲ. ಅದಕ್ಕೇ ನಾನು ಪದೇ ಪದೇ ಗಂಭೀರನೇ ಆದೆ. ಆಟವನ್ನು ಉಜ್ಜುತ್ತಾ ಬಂದೆ. ಬಹುಶಃ ಈ ಕಾರಣಕ್ಕೇ ನಗು ನನಗೆ ಆಪ್ತಸ್ನೇಹಿತ ಅಲ್ಲ'.

ನಿಜ, ಗೌತಮ್ ನಿರಾಕರಣೆಯ ಸೂಜಿಮೊನೆಯಿಂದ ಚುಚ್ಚಿಸಿಕೊಂಡಿರುವುದು ಒಂದೆರಡು ಸಲ ಅಲ್ಲ. 2007ರಲ್ಲಿ ವೆಸ್ಟ್‌ಇಂಡೀಸ್‌ನಲ್ಲಿ ನಡೆದ ವಿಶ್ವಕಪ್ ಟೂರ್ನಿಗೆ ಅವರು ಆಯ್ಕೆಯಾಗಲಿಲ್ಲ. ಅದುವರೆಗೆ ಆಡಿದ್ದ 13 ಟೆಸ್ಟ್ ಹಾಗೂ 19 ಏಕದಿನ ಪಂದ್ಯಗಳಲ್ಲಿ ಎರಡು ಶತಕಗಳಷ್ಟೇ ಸೇರಿದ್ದವು. ತಮ್ಮದೇ ನಗರದ ದೈತ್ಯ ಸೆಹ್ವಾಗ್ ಅರ್ಭಟದ ನೆರಳಲ್ಲಿ ಗೌತಮ್ ಬೆಳೆಯುವುದು ಸುಲಭವಿರಲಿಲ್ಲ.

ಗೌತಮ್ ಅಂಥ ಬಿಸಿಲನ್ನು ತಾವೇ ಹುಡುಕಿಕೊಂಡು ಹೋದರು. ವಿಶ್ವಕಪ್‌ನಲ್ಲಿ ಆಡಬೇಕೆಂಬ ಕನಸು ಮೊದಲಿಗೆ ನನಸಾಗದೇ ಹೋದದ್ದಕ್ಕೆ ಅವರ ಕಣ್ಣುಗಳು ಅದೆಷ್ಟು ಸಲ ಒದ್ದೆಯಾಗಿದ್ದವೋ? ಒರೆಸಿಕೊಂಡು ದೇಸಿ ಕ್ರಿಕೆಟ್‌ನಲ್ಲಿ ಮತ್ತೆ ಬ್ಯಾಟ್ ಹಿಡಿದು ನಿಂತರು. ಸಿಟ್ಟಿಗೆದ್ದ ಕ್ಷಣಗಳಲ್ಲೇ ಕ್ರೀಸ್‌ನಿಂದ ಒಂದೆರಡು ಹೆಜ್ಜೆ ಮುಂದೆ ಬಂದು ತಮ್ಮದೇ ಶೈಲಿಯಲ್ಲಿ 'ಕಟ್' ಮಾಡತೊಡಗಿದರು. ಅದನ್ನು ನಾವು 'ಕೋಪದ ಕಟ್' ಎಂದೂ ಕರೆಯಬಹುದು.

2011ರ ಏಪ್ರಿಲ್ 2ರಂದು ನಡೆದ ಪಂದ್ಯದ ಸ್ಕೋರ್ ಕಾರ್ಡ್‌ನಲ್ಲಿ ಒಂದು ಸಾಲು ಹೀಗಿತ್ತು: 'ಗೌತಮ್ ಗಂಭೀರ್ ಬೌಲ್ಡ್ ಪೆರೆರಾ 97 (122 ಎಸೆತ, 9 ಬೌಂಡರಿ)'. ವಿಶ್ವಕಪ್ ಫೈನಲ್‌ನ ಗೆಲುವಿನ ರನ್ ಗಳಿಕೆ ಅದು. ಮಹೇಂದ್ರ ಸಿಂಗ್ ದೋನಿ ಆ ಪಂದ್ಯದ ಶ್ರೇಷ್ಠ ಆಟಗಾರನಾಗಿ ಹೊಮ್ಮಿದರೂ ಗಂಭೀರ್ ಬಾಲ್ಯದ ಕನಸಿಗೆ ದೊಡ್ಡ ಫಲ ಸಂದ ದಿನ ಅದು. ಅವತ್ತೂ ಗಂಭೀರ್ ಶತಕದ ಹತ್ತಿರ ಬಂದಾಗ ಉಸಿರುಗಟ್ಟಿದವರಂತೆ ಆಗಿಬಿಟ್ಟಿದ್ದರು. ಪಂದ್ಯದ ಎರಡನೇ ಎಸೆತದಲ್ಲೇ ವೀರೇಂದ್ರ ಸೆಹ್ವಾಗ್ ಔಟಾಗಿ, 31 ರನ್ ಆಗುವಷ್ಟರಲ್ಲಿ ಸಚಿನ್ ಕೂಡ ಪೆವಿಲಿಯನ್ ಸೇರಿದ್ದ ಘಟ್ಟದಲ್ಲಿ ಈ ಗೌತಮ 'ಗಂಭೀರ' ಆಗಿದ್ದು ಅರ್ಥಪೂರ್ಣವೇ. ಅದು ಎಷ್ಟೋ ಜನರಿಗೆ ಮರೆತೇಹೋಗಿದೆ.

ಗಂಭೀರ್‌ಗೆ ಸ್ಥಿತಿಸ್ಥಾಪಕ ಗುಣವೂ ಇತ್ತು. ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್)ನಲ್ಲಿ ಅವರ ಮೇಲೆ 'ಡೆಲ್ಲಿ ಡೇರ್‌ಡೆವಿಲ್ಸ್'ಗಿಂತ 'ಕೋಲ್ಕತ್ತ ನೈಟ್ ರೈಡರ್ಸ್' ಹೆಚ್ಚು ಭರವಸೆಯನ್ನಿಟ್ಟಿತು. ಶಾರುಖ್ ಖಾನ್ ಗ್ಯಾಲರಿಗಳಲ್ಲಿ ನಿಂತು ನಗುತ್ತಾ, ಹ್ಯಾಪುಮೋರೆ ಹಾಕಿಕೊಳ್ಳುತ್ತಾ ಟೀಕಾಪ್ರಹಾರವನ್ನೂ ಎದುರಿಸುವಷ್ಟು ತಮ್ಮ ತಂಡವನ್ನು ಹಚ್ಚಿಕೊಂಡಿದ್ದರು. ಆ ತಂಡದ ನಾಯಕನಾಗಿ ಎರಡು ಸಲ ಗಂಭೀರ್ ಕಪ್ ಗೆದ್ದುಕೊಟ್ಟರು.

'ಇಪ್ಪತ್ತೈದು ಲಕ್ಷ ಡಾಲರ್ ಹಣಕ್ಕೆ ನನ್ನನ್ನು ಬಿಡ್ ಮಾಡಿದಾಗಲೇ ಐಪಿಎಲ್ ಒತ್ತಡದ ಭಾರವನ್ನು ತಂದು ಹೆಗಲ ಮೇಲಿಟ್ಟುಬಿಟ್ಟಿತು. ಏಳು ವರ್ಷ ನಾನು ಹಲವು ಗೆಲುವುಗಳ ನಂತರವೂ ಹೆಣಗಾಡಿದೆ. ಇನ್ನೀಗ ನಿರಾಳ' ಎಂದು ನಿವೃತ್ತಿಯ ನಂತರ ಅವರು ಹಂಚಿಕೊಂಡದ್ದು ಅನುಭವದ ಮಾತು.

ಹತ್ತು ವರ್ಷಗಳ ಏಕದಿನ ಕ್ರಿಕೆಟ್ ಪಂದ್ಯಗಳ ವೃತ್ತಿಬದುಕಿನಲ್ಲಿ 147 ಪಂದ್ಯಗಳನ್ನು ಆಡಿ 5,238 ರನ್‌ಗಳನ್ನು ಗೌತಮ್ ಕಲೆಹಾಕಿದ್ದರು (9 ಶತಕ, 22 ಅರ್ಧಶತಕ). ಹನ್ನೆರಡು ವರ್ಷಗಳ ಟೆಸ್ಟ್ ಕ್ರಿಕೆಟ್‌ನಲ್ಲಿ ಆಡಲಾದದ್ದು 58 ಪಂದ್ಯಗಳನ್ನು. 4,154 ರನ್‌ಗಳಲ್ಲಿ ಹನ್ನೊಂದು ಶತಕ, 34 ಅರ್ಧಶತಕಗಳ ಸಂತಸ. 37 ಟ್ವೆಂಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 932 ರನ್; ಅದರಲ್ಲಿ ಒಂದು 75, 7 ಅರ್ಧಶತಕ – ಇದಿಷ್ಟನ್ನೇ ಓದಿಕೊಂಡರೆ ಗೌತಮ್ ಗಂಭೀರ್ ಬದುಕಿನ ಸಂಕಷ್ಟಗಳು ಅಂದಾಜಿಗೆ ಸಿಗಲು ಸಾಧ್ಯವಿಲ್ಲ.

ನತಾಶಾ ಜೈನ್ ಜತೆ ಸಪ್ತಪದಿ ತುಳಿದು ಏಳು ವರ್ಷಗಳಾಗಿವೆಯಷ್ಟೆ. ಆ ಬದುಕನ್ನು ಇನ್ನಷ್ಟು ಹಸನಾಗಿಸಿಕೊಳ್ಳುವ ಉಮೇದು ಅವರದ್ದು.